**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಸಿ.ಸಿ. ನಂಃ 131/2016**

**ಫಿರ್ಯಾಧಿಕಾರ : ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ ಗ್ರಾಮೀಣ ಪೊಲೀಸ್ ಠಾಣೆ**

**// ವಿರುದ್ದ //**

**ಆರೋಪಿತರು : ಬಲರಾಮ ಮತ್ತು ಇತರರು**

**<u>ದೋಷಾರೋಪಣೆ</u>**

ನಾನು ಶ್ರೀ ಲೋಕೇಶ ಧನಪಾಲ ಹವಲೆ, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು ಯಾದಗಿರಿ, ಆರೋಪಿತರು.

01. ಬಲರಾಮ ತಂದೆ ಗನ್ನು ರಾಠೋಡ, ವಃ 50 ವರ್ಷ, ಉಃ ಒಕ್ಕಲುತನ,
02. ಶೀಲಾ ಗಂಡ ಲಕ್ಷ್ಮಣ ರಾಠೋಡ, ವಃ 32 ವರ್ಷ, ಉಃ ಮನೆಕೆಲಸ,
03. ವಿಜಯ ತಂದೆ ಬಲರಾಮ ರಾಠೋಡ, ವಃ 32 ವರ್ಷ, ಉಃ ಒಕ್ಕಲುತನ,
04. ಪರಶುರಾಮ ತಂದೆ ಮನ್ನು ಚವ್ಹಾಣ, ವಃ 50 ವರ್ಷ, ಉಃ ಒಕ್ಕಲುತನ,

ಎಲ್ಲರೂ ಸಾಃ ಚಾಮನಳ್ಳಿ ತಾಂಡಾ, ತಾಃ ಜಿಃ ಯಾದಗಿರಿ.

ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ದಿಃ 10.05.2010 ರಂದು ಯಾದಗಿರಿ ಗ್ರಾಮೀಣ ಠಾಣೆ ವ್ಯಾಪ್ತಿಯಲ್ಲಿ 2 ರಿಂದ 4 ನೇ ಆರೋಪಿತರಾದ ನೀವು ಅಪರಾಧ ಮಾಡವ ಏಕೋದ್ದೇಶ ಹೊಂದಿದ್ದು ಮೃತ 1 ನೇ ಆರೋಪಿ ತಾವು ಚಾಮನಳ್ಳಿ ತಾಂಡಾ ಸೀಮಾಂತರದ ಹೊಲದ ಸರ್ವೆ ನಂಃ 150 ರ ಮಾಲೀಕರಾದ ಸಾಕ್ಷಿ 1 ಎಂದು ನಟಿಸಿದ್ದು, 2 ನೇ ಆರೋಪಿಯಾದ ನೀವು ಸಾಕ್ಷಿ ನಂಃ1 ರವರ ಹೆಂಡತಿಯಂತೆ ನಟಿಸಿ ಸಾಕ್ಷಿ 1 ರವರ ಹೊಲವನ್ನು ಮಾರಾಟ ಮಾಡಲು ತಮಗೆ ಯಾವುದೇ ಹಕ್ಕು ಇಲ್ಲ ಎಂದು ಗೊತ್ತಿದ್ದರೂ ಸಹ ಮಾರಾಟ ಮಾಡುವ ಉದ್ದೇಶಹೊಂದಿ ಯಾದಗಿರಿ ಉಪ ನೊಂದಣಾಧಿಕಾರಿಯವರ ಕಚೇರಿಯಲ್ಲಿ ಸದರಿ ಹೊಲವನ್ನು ಕಪಟಕ್ಕೊಳಗಾದ ಸಾಕ್ಷಿ 10 ರವರಿಗೆ ರೂ.1,04,250/- ಗಳಿಗೆ ಕರಾರು ಒಪ್ಪಂದ ಪತ್ರ ಬರೆದುಕೊಟ್ಟು ಅವರಿಂದ ರೂ.75,000/- ಮುಂಗಡ ಹಣ ಪಡೆದಿದ್ದು, 3 ನೇ ಆರೋಪಿಯಾದ ನೀವು ವಿಜಯ ತಂದೆ ಕಿಶನ ಮುದ್ನಾಳೆ ಎಂಬ ಅನಾಮಧೇಯ ವ್ಯಕ್ತಿಯಂತೆ ನಟಿಸಿ ಸಾಕ್ಷಿದಾರರಾಗಿ

ಸಹಿ ಹಾಕಿದ್ದು, 4 ನೇ ಆರೋಪಿಯಾದ ನೀವು ಮೇಲ್ಕಂಡ ಆರೋಪಿತರು ಮೋಸ ಮಾಡುವ ಉದ್ದೇಶದಿಂದ ನಟಿಸುತ್ತಿದ್ದಾರೆ ಎಂದು ಗೊತ್ತಿದ್ದರೂ ಸಹ ಒಪ್ಪಂದ ಪತ್ರಕ್ಕೆ ಸಹಿ ಹಾಕಿದ್ದು 2 ರಿಂದ 4 ನೇ ಆರೋಪಿತರಾದ ನೀವು ಭಾ.ದಂ.ಸಂ. 419 ಸಹ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

2. ಈ ಮೇಲೆ ಹೇಳಿದ ದಿನಾಂಕ ಮತ್ತು ಸಂದರ್ಭದಂದು 2 ರಿಂದ 4 ನೇ ಆರೋಪಿತರಾದ ನೀವು ಅಪರಾಧ ಮಾಡವ ಏಕೋದ್ದೇಶ ಹೊಂದಿದ್ದು ಚಾಸಾ-1 ರವರ ಜಮೀನನ್ನು ಚಾಸಾ-10 ರವರಿಗೆ ಮಾರಾಟ ಮಾಡುವ ಉದ್ದೇಶಹೊಂದಿ ಕಪಟಕ್ಕೊಳಗಾದ ಸಾಕ್ಷಿ 10 ರವರಿಗೆ ರೂ.1,04,250/- ಗಳಿಗೆ ಕರಾರು ಒಪ್ಪಂದ ಪತ್ರ ಬರೆದುಕೊಟ್ಟು ಅವರನ್ನು ವಂಚಿಸುವ ಮೂಲಕ ನಿಮಗೆ ಅವರು ರೂ.75,000/- ಮುಂಗಡ ಹಣ ಕೊಡುವಂತೆ ಮಾಡಿದ್ದು 2 ರಿಂದ 4 ನೇ ಆರೋಪಿತರಾದ ನೀವು ಭಾ.ದಂ.ಸಂ. 420 ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

3. ಈ ಮೇಲೆ ಹೇಳಿದ ದಿನಾಂಕ ಮತ್ತು ಸಂದರ್ಭದಂದು 2 ರಿಂದ 4 ನೇ ಆರೋಪಿತರಾದ ನೀವು ಅಪರಾಧ ಮಾಡವ ಏಕೋದ್ದೇಶ ಹೊಂದಿದ್ದು ಚಾಸಾ-1 ರವರ ಜಮೀನನ್ನು ಚಾಸಾ-10 ರವರಿಗೆ ಮಾರಾಟ ಮಾಡುವ ಉದ್ದೇಶಕ್ಕಾಗಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದು, 2 ರಿಂದ 4 ನೇ ಆರೋಪಿತರಾದ ನೀವು ಭಾ.ದಂ.ಸಂ. 465 ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

4. ಈ ಮೇಲೆ ಹೇಳಿದ ದಿನಾಂಕ ಮತ್ತು ಸಂದರ್ಭದಂದು 2 ರಿಂದ 4 ನೇ ಆರೋಪಿತರಾದ ನೀವು ಅಪರಾಧ ಮಾಡವ ಏಕೋದ್ದೇಶ ಹೊಂದಿದ್ದು ಚಾಸಾ-1 ರವರ ಜಮೀನನ್ನು ಚಾಸಾ-10 ರವರಿಗೆ ಮಾರಾಟ ಮಾಡಿ ಅವರಿಗೆ ವಂಚನೆ ಮಾಡಬೇಕೆಂಬ ಉದ್ದೇಶಕ್ಕಾಗಿಯೆ ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿದ್ದು 2 ರಿಂದ 4 ನೇ ಆರೋಪಿತರಾದ ನೀವು ಭಾ.ದಂ.ಸಂ. 468 ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಲಾಯಿತು.)

ದಿನಾಂಕಃ 02-08-2019

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.